(ಅ) ಶಹಬಾದಿನಲ್ಲಿ ನೀರು ಸರಬರಾಜಿನ ಬಗ್ಗೆ ಒಂದು ಬೃಹತ್ ಯೋಜನೆ ತೆಗೆದುಕೊಂಡು ಅದನ್ನು ರಾಜ್ಯದ ಮುಖ್ಯ ಮಂತ್ರಿಗಳ ೧೯೮೪ರಲ್ಲಿ ಶಂಕುಸ್ಥಾಪನೆ ಮಾಡಿರುವುದು ಸರ್ಕಾರದವರ ಗಮನದಲ್ಲಿದೆಯೇ, ಹಾಗಿದ್ದಲ್ಲಿ, ತಗಲುವ ಒಟ್ಟು ವೆಚ್ಚವೆಷ್ಟು ?

(ಆ) ಈ ಯೋಜನೆಗೆ ಜೀವ ವಿಮಾ ಸಂಸ್ಥೆಯಿಂದ ಹಣವನ್ನು ಪಡೆಯಲಾಗಿದೆಯೇ, ಹಾಗಿದ್ದಲ್ಲಿ, ಇದುವರೆಗೆ ಅವರು ಎಷ್ಟು ಹಣವನ್ನು ಬಿಡುಗಡೆ ಮಾಡಿದ್ದಾರೆ, ಹಾಗೂ ಈ ಹಣಕ್ಕೆ ಎಷ್ಟು ಹಣವನ್ನು ಬಡ್ಡಿಯ ರೂಪದಲ್ಲಿ ಕೊಡಲಾಗಿದೆ?

(ಇ) ಈ ಯೋಜನೆ ಯಾವಾಗ ಪೂರ್ತಿಗೊಳ್ಳುವುದು ?

ಪ್ರೊ. ಎ. ಲಕ್ಷ್ಮೀಸಾಗರ್ (ನಗರಾಭಿವೃದ್ಧಿ ಸಚಿವರು).—

(ಅ) ಇದೆ. ಅಂದಾಜು ವೆಚ್ಚ ೮೫.೦೦ ಲಕ್ಷ ರೂಪಾಯಿಗಳು.

(ಆ) ಹೌದು. ಜೀವ ವಿಮಾ ಸಂಸ್ಥೆಯವರು ಈವರೆವಿಗೆ ಒಟ್ಟು ೨೮.೦೦ ಲಕ್ಷ ರೂ.ಗಳನ್ನು ಬಿಡುಗಡೆ ಮಾಡಿದ್ದಾರೆ. ಈವರೆವಿಗೆ ಕೊಡಲಾಗಿರುವ ಬಡ್ಡಿ ಹಣದ ಮೊತ್ತ ರೂ. ೬,೫೫,೯೫೯ಗಳು.

(ಇ) ೧೯೮೮ರ ಡಿಸೆಂಬರ್ ಮಾಹೆಯೊಳಗೆ ಈ ಯೋಜನೆಯನ್ನು ಪೂರ್ಣಗೊಳಿಸಲು ನಿಯೋಜಿಸಲಾಗಿದೆ.

ಬೈಂದೂರು ಪುರಸಭೆಯನ್ನು ಮಂಡಲ ಪಂಚಾಯತ್ ಆಗಿ ಮಾರ್ಪಡಿಸುವ ಬಗ್ಗೆ

೫೩೨ (ಸಿ) ಶ್ರೀ ಜಿ. ಎಸ್. ಆಚಾರ್ (ಬೈಂದೂರು).—ಮಾನ್ಯ ಗ್ರಾಮೀಣಾಭಿವೃದ್ಧಿ ವಸತಿ ಮತ್ತು ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ೧೯೭೧ರ ಖಾನೆಸುಮಾರಿಯಂತೆ ಕೇವಲ ಕೆಲವೇ ನೂರು ಜನಸಂಖ್ಯೆ ಅಧಿಕ ಇರುವ ಬೈಂದೂರು ಪುರಸಭೆಯನ್ನು ಮಂಡಲ ಪಂಚಾಯತ್ ಆಗಿ ಪರಿವರ್ತಿಸಲು ಪುರಸಭೆಯವರು ಹಾಗೂ ಸಾರ್ವಜನಿಕರು ಸರಕಾರವನ್ನು ಒತ್ತಾಯಿಸಿದ್ದು ಘಟದ ಸರಹದ್ದಿನ ಕಂಗ್ರಾಪುಗಳೇ ಜಾಸ್ತಿ ಇರುವ ಹಾಗೂ ಪರಿಶಿಷ್ಟಜಾತಿ ಬುಡಕಟ್ಟಿನ ಜನರು ಹೆಚ್ಚಾಗಿರುವ ಈ ಪ್ರದೇಶವನ್ನು ಮಂಡಲ ಪಂಚಾಯತ್ ಆಗಿ ಪರಿವರ್ತಿಸಲಾಗುವುದೇ ?

ಆ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರದವರು ಯಾವ ಕ್ರಮ ಕೈಗೊಂಡಿದ್ದಾರೆ ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣಾಭಿವೃದ್ಧಿ, ವಸತಿ ಮತ್ತು ವಕ್ಫ್ ಮಂತ್ರಿಗಳು).-

ಅ) ಪ್ರಜಾಸಂಖ್ಯೆ ೧೦,೦೦೦ ಹಾಗೂ ೧೦,೦೦೦ ಕ್ಕಿಂತ ಕಡಿಮೆ ಇರುವ ಪುರಸಭೆಗಳನ್ನು ಮಂಡಲ ಪಂಚಾಯತಿಗಳಿಗಾಗಿ ಪರಿವರ್ತಿಸಲಾಗಿದೆ ಬೈಂದೂರು ಪುರಸಭೆಯ ಜನಸಂಖ್ಯೆ ೧೦,೩೫೪ ಇರುವುದರಿಂದ ಈ ಪುರಸಭೆಯನ್ನು ಮಂಡಲ ಪಂಚಾಯಿತಿಯನ್ನಾಗಿ ಪರಿವರ್ತಿಸಲಾಗಲಿಲ್ಲ. ಈ ಬಗ್ಗೆ ಸರ್ಕಾರಕ್ಕೆ ಯಾವ ಪ್ರಸ್ತಾವನೆಗಳು ಬಂದಿರುವುದಿಲ್ಲ. ಹಿಂದಿನ ಅಧಿವೇಶನದಲ್ಲಿ ಈ ಬಗ್ಗೆ ಮಾನ್ಯ ಸದಸ್ಯರು ಪ್ರಶ್ನಿಸಲಾಗಿದ್ದು ಉತ್ತರವನ್ನು ಸಹ ನೀಡಲಾಗಿತ್ತು.

ಆ) ಮೇಲಿನ 'ಅ' ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಕರ್ನಾಟಕ ರಾಜ್ಯದಲ್ಲಿ ಇರುವ ಹಳ್ಳಿಗಳಿಗೆ ಕುಡಿಯುವ ನೀರು ಸರಬರಾಜು ಯೋಜನೆಯು ಮಂಜೂರಾಗುವ ಬಗ್ಗೆ

೫೪೪ (೫) ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಗ್ರಾಮೀಣಾಭಿವೃದ್ಧಿ ವಸತಿ ಹಾಗೂ ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

೧. ಕರ್ನಾಟಕ ರಾಜ್ಯದಲ್ಲಿ ಇರುವ ಹಳ್ಳಿಗಳ ಸಂಖ್ಯೆ ಮತ್ತು ಅವುಗಳಲ್ಲಿ ಎಷ್ಟು ಹಳ್ಳಿಗಳಿಗೆ ಕುಡಿಯುವ ನೀರು ಸರಬರಾಜು ಯೋಜನೆಗಳು ಮಂಜೂರಾಗಿವೆ ?

೨. ಕರ್ನಾಟಕ ರಾಜ್ಯದಲ್ಲಿ ರಾಷ್ಟ್ರೀಯ ಗ್ರಾಮಾಂತರ ನೀರು ಸರಬರಾಜು ಯೋಜನೆಗಳು ಎಷ್ಟು ಮಂಜೂರಾಗಿವೆ ? (ಜಿಲ್ಲಾವಾರು ವಿವರಗಳನ್ನು ಕೊಡಬಹುದು)

೩. ಕೋಲಾರ ಜಿಲ್ಲೆಯಲ್ಲಿ ಮಂಜೂರಾಗಿರುವ ಸಣ್ಣ ನೀರು ಸರಬರಾಜು ಯೋಜನೆಗಳು ಮತ್ತು ರಾಷ್ಟ್ರೀಯ ಗ್ರಾಮಾಂತರ ನೀರು ಸರಬರಾಜು ಯೋಜನೆಗಳು ಎಷ್ಟು ?

ಶ್ರೀ ಅಬ್ದುಲ್ ನಜೀರ್ ಸಾಬ್(ಗ್ರಾಮೀಣಾಭಿವೃದ್ಧಿ, ಪಸತಿ ಹಾಗೂ ಪಕ್ಷ್ಯೆ ಮಂತ್ರಿಗಳು).–

೧. ೨೭೦೨೮ ಕೆವಿನ್ಯೂ ಹಳ್ಳಿಗಳಿವೆ. ೨೮೦೧ ಹಳ್ಳಿಗಳಿಗೆ ಸಣ್ಣ ನೀರು ಸರಬರಾಜು ಯೋಜನೆ ಮಂಜೂರಾಗಿದೆ. (ವಿವರಣಾ ಪತ್ರ–೧ ಲಗತ್ತಿಸಿದೆ)

೨. ೨೯೫೩ ಎನ್‌ಆರ್‌ಡಬ್ಲ್ಯೂಎಸ್ ೧೧೫೨ ಎ.ಆರ್.ಡಬ್ಲ್ಯೂ.ಎಸ್. (ಜಿಲ್ಲಾವಾರು ವಿವರ–ವಿವರಣಾ ಪತ್ರ–೨ ಲಗತ್ತಿಸಿದೆ)

೩. ೧೭೨ ಸಣ್ಣ ನೀರು ಸರಬರಾಜು ಯೋಜನೆ. ೧೮೦ ಎನ್.ಆರ್.ಡಬ್ಲ್ಯೂ.ಎಸ್. ೪೬ ಎ.ಆರ್.ಡಬ್ಲ್ಯೂ.ಎಸ್. (ವಿವರಣಾ ಪತ್ರ–೩–ಲಗತ್ತಿಸಿದೆ)

ವಿವರಣಾ ಪತ್ರ ೧

ಕರ್ನಾಟಕ ರಾಜ್ಯದಲ್ಲಿ ಸಣ್ಣ ನೀರು ಸರಬರಾಜು ಯೋಜನೆಗಳಂ ಮಂಜೂರಾಗಿರುವ ವಿವರಗಳು (ಜಿಲ್ಲಾವಾರಂ)

ಕ್ರಮ ಸಂಖ್ಯೆ	ಜಿಲ್ಲೆ	೧೯೮೧ ಜನಗಣತಿಯ ಪ್ರಕಾರಗಳು ಇರುವ ಹಳ್ಳಿಗಳ ಸಂಖ್ಯೆ	ಸಣ್ಣ ನೀರು ಸರಬರಾಜು ಯೋಜನೆಗಳು ಮಂಜೂರಾಗಿರುವ ಹಳ್ಳಿಗಳ ಸಂಖ್ಯೆ
೧.	ಬೆಂಗಳೂರು	೨೪೨೫	೧೬೦
೨.	ಕೋಲಾರ	೨೬೪೮	೧೭೨
೩.	ತುಮಕೂರು	೨೫೦೭	೧೬೫
೪.	ಚಿತ್ರದುರ್ಗ	೧೨೬೬	೧೫೨
೫.	ಶಿವಮೊಗ್ಗ	೧೭೯೫	೧೬೨
೬.	ಚಿಕ್ಕಮಗಳೂರು	೧೦೦೫	೧೫೫
೭.	ಮೈಸೂರು	೧೬೪೦	೧೫೪
೮.	ಮಂಡ್ಯ	೧೫೫೪	೯೨
೯.	ಹಾಸನ	೨೫೭೦	೧೫೦
೧೦.	ದಕ್ಷಿಣ ಕನ್ನಡ	೬೫೫	೯೬
೧೧.	ಕೊಡಗು	೨೮೮	೨೧
೧೨.	ಬೆಳಗಾವಿ	೧೧೪೨	೨೭೦
೧೩.	ಧಾರವಾಡ	೧೫೨೨	೨೫೦
೧೪.	ಬಿಜಾಪುರ	೧೨೪೪	೧೮೬
೧೫.	ಉತ್ತರ ಕನ್ನಡ	೧೨೮೫	೪೪
೧೬.	ಗುಲ್ಬರ್ಗ	೧೫೦೫	೧೬೦
೧೭.	ಬೀದರ್	೫೯೮	೯೭
೧೮.	ರಾಯಚೂರು	೧೪೦೧	೨೦೬
೧೯.	ಬಳ್ಳಾರಿ	೫೯೦	೧೯೧
	ಒಟ್ಟು	೨೭,೦೨೮	೨೮೦೧

ವಿವರಣಾ ಪತ್ರ—೨

ನಳದ ನೀರು ಸರಬರಾಜು ಯೋಜನೆಗಳು ರಾಜ್ಯ ಮತ್ತು ಕೇಂದ್ರ ವಲಯದಲ್ಲಿ ಮಂಜೂರಾಗಿರುವ ಹಳ್ಳಿಗಳ ವಿವರಗಳು (ಜಿಲ್ಲಾವಾರು)

	ಜಿಲ್ಲೆ	ನಳದ ನೀರು ಸರಬರಾಜು ಯೋಜನೆಗಳು ಮಂಜೂರಾಗಿರುವ ಹಳ್ಳಿಗಳ ಸಂಖ್ಯೆ		
		(ಎನ್‌ಆರ್‌ಡಬ್ಲ್ಯೂಎಸ್) ರಾಜ್ಯ ವಲಯ	(ಎಆರ್‌ಡಬ್ಲ್ಯೂಎಸ್) ಕೇಂದ್ರ ವಲಯ	ಮೊತ್ತ
೧.	ಬೆಂಗಳೂರು	೧೯೬	೫೮	೨೫೪
೨.	ಕೋಲಾರ	೧೮೦	೪೬	೨೨೬
೩.	ತುಮಕೂರು	೧೬೩	೫೩	೨೧೬
೪.	ಚಿತ್ರದುರ್ಗ	೧೭೮	೫೮	೨೩೬
೫.	ಶಿವಮೊಗ್ಗ	೧೪೧	೫೨	೧೯೩
೬.	ಚಿಕ್ಕಮಗಳೂರು	೧೨೯	೩೬	೧೬೫
೭.	ಮೈಸೂರು	೨೭೯	೧೨೮	೪೦೭
೮.	ಮಂಡ್ಯ	೯೬	೭೭	೧೭೩
೯.	ಹಾಸನ	೧೫೭	೭೦	೨೨೭
೧೦.	ದಕ್ಷಿಣ ಕನ್ನಡ	೧೧೪	೨೫	೧೩೯
೧೧.	ಕೊಡಗು	೩೧	೨೦	೫೧
೧೨.	ಬೆಳಗಾವಿ	೨೨೬	೧೦೨	೩೨೮
೧೩.	ಧಾರವಾಡ	೨೫೫	೧೫೫	೩೯೦
೧೪.	ಬಿಜಾಪುರ	೧೬೯	೫೦	೨೧೯
೧೫.	ಉತ್ತರ ಕನ್ನಡ	೮೭	೧೩	೧೦೦
೧೬.	ರಾಯಚೂರು	೧೬೧	೪೨	೨೦೩
೧೭.	ಬಳ್ಳಾರಿ	೧೧೧	೩೮	೧೪೯
೧೮.	ಬೀದರ್	೮೮	೪೦	೧೨೮
೧೯.	ಗುಲ್ಬರ್ಗಾ	೨೧೨	೮೯	೩೦೧
	ಮೊತ್ತ	೨೯೫೩	೧೧೫೨	೪೧೦೫

ಬಾಗಲ ಕೋಟೆ ಟೌನ್‌ಷಿಪ್ ಅನ್ನು ಹೊಸದಾಗಿ ಕಟ್ಟುವ ಬಗ್ಗೆ

೫೫ (೧೩) ಶ್ರೀ ಕೆ.ಹೆಚ್. ಪಾಟೀಲ್ (ಗದಗ್).—ಮುನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

ಅ) ಬಾಗಲಕೋಟೆ ಟೌನ್‌ಷಿಪ್ ಅನ್ನು ಪುನರ್ ರಚಿಸುವ ಬಗ್ಗೆ ಸರ್ಕಾರವು ತೆಗೆದುಕೊಂಡಿರುವ ಕ್ರಮವೇನು ?

ಆ) ಈ ಬಗ್ಗೆ ಈಗಾಗಲೇ ಖರ್ಚು ಮಾಡಿರುವ ಹಣವೆಷ್ಟು ?

ಇ) ಸುಮಾರು ಯಾವ ತಾರೀಖಿಗೆ ಮುಗಿಯಬಹುದು?

ಪ್ರೊ. ಎ. ಲಕ್ಷ್ಮೀಸಾಗರ್ (ಸಂಸದೀಯ ವ್ಯವಹಾರ ಮತ್ತು ಆಹಾರ ನಾಗರೀಕ ಸರಬರಾಜು ಸಚಿವರು).—

ಅ) ಬಾಗಲಕೋಟೆ ಟೌನ್‌ಷಿಪ್ ಅನ್ನು ಪುನರ್‌ರಚಿಸುವ ಕಾರ್ಯಕ್ರಮವಿಲ್ಲ. ಆದರೆ ಈಗ ಮುಳುಗಡೆಯಾಗುವ ಪ್ರದೇಶದ ಜನರನ್ನು ಬೇರೆ ಕಡೆ ಪುನರ್ವಸತಿಗೊಳಿಸುವ ಒಂದು ಹೊಸ